KACD410005812025

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹೊಳಲ್ಕೆರೆ.</u>

<u>ಉಪಸ್ಥಿತರು</u>

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

ದಿನಾಂಕ 17 ನೇ ಜೂನ್, 2026

<u>ಅಸಲು ದಾವಾ ಸಂಖ್ಯೆ-70/2025</u>

ವಾದಿ - ಕರ್ನಾಟಕ ಗ್ರಾಮೀಣ ಬ್ಯಾಂಕ್,
ಪ್ರಧಾನ ಕಛೇರಿ ಬಳ್ಳಾರಿ,
ಎನ್.ಜಿ. ಹಳ್ಳಿ ಗ್ರಾಮ ಶಾಖೆ,
ಹೊಳಲ್ಕೆರೆ ತಾಲ್ಲೂಕು,
ಇವರ ಪರವಾಗಿ ಪ್ರತಿನಿಧಿಸುವವರು
ಪ್ರಸ್ತುತ ಶಾಖಾ ವ್ಯವಸ್ಥಾಪಕರು
ಮತ್ತು ಮುಕ್ತಿಯಾರನಾಮೆದಾರರು,
ಶ್ರೀ ಜಗದೀಶ್ ಚಂದ್
ಬಿನ್ ಮೋಹನ್ ರಾವ್,
ವಯಸ್ಸುಃ ಸುಮಾರು 36 ವರ್ಷ,
ವಾಸಃ ಎನ್.ಜಿ.ಹಳ್ಳಿ ಗ್ರಾಮ,
ರಾಮಗಿರಿ ಹೋಬಳಿ, ಹೊಳಲ್ಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಜಿ.ಈ. ರಂಗಸ್ವಾಮಿ, ನ್ಯಾಯವಾದಿಗಳು)

-ವಿರುದ್ಧ-

ಪ್ರತಿವಾದಿ - ವೆಂಕಟೇಶ್ ಬಿನ್ ತಿಮ್ಮಪ್ಪ,
ವಯಸ್ಸುಃ ಸುಮಾರು 53 ವರ್ಷ,
ಉದ್ಯೋಗಃ ವ್ಯವಸಾಯಗಾರರು,
ವಾಸಃ ಆರ್. ಗೊಲ್ಲರಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಕೆ. ದಿವಾಕರ್, ನ್ಯಾಯವಾದಿಗಳು)

1	ದಾವಾ ದಾಖಲಿಸಿದ ದಿನಾಂಕ	29.04.2025		
2	ದಾವಾ ಸ್ವರೂಪ	ಹಣದ ವಸೂಲಾತಿ		
3	ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ	18.11.2025		
4	ತೀರ್ಪನ್ನು ಉದ್ಘೋಷಿಸಿದ ದಿನಾಂಕ	17.06.2026		
5	ತೆಗೆದುಕೊಂಡ ಅವಧಿ	ವರ್ಷ	ತಿಂಗಳು	ದಿನಗಳು
		01	01	18

*****

ತೀರ್ಪು

ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ರೂ.10,26,523/- ಮೊತ್ತವನ್ನು ವಾರ್ಷಿಕ ಶೇಕಡ 14.00ರ ಬಡ್ಡಿ ದರದಂತೆ ವಸೂಲಾತಿ ಮಾಡಿಕೊಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

2. ವಾದಿಯು ಸಲ್ಲಿಸಿರುವ ವಾದಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆಃ-

ವಾದಿ ಬ್ಯಾಂಕು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಕಾಯಿದೆ 1976ರ ನಿಯಮ 23(ಎ) ರ ಅಡಿಯಲ್ಲಿ ಕೆನರಾ ಬ್ಯಾಂಕಿನ ಪ್ರಾಯೋಜಕತ್ವದ ಅಡಿಯಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕು ಎಂದು ರೂಪಿತವಾಗಿರುತ್ತದೆ. ಪ್ರಾರಂಭಿಕ ಹಂತದಲ್ಲಿ

ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕು ಎಂಬ ಹೆಸರಿನಡಿಯಲ್ಲಿ ಕೆನರಾ ಬ್ಯಾಂಕಿನ ಪ್ರಾಯೋಜಕತ್ವದ ಅಡಿಯಲ್ಲಿ ಸ್ಥಾಪನೆಗೊಂಡಿದ್ದು, ಆ ನಂತರದಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕಿನೊಂದಿಗೆ ವಿಲೀನಗೊಂಡಿರುತ್ತದೆ. ಕರ್ನಾಟಕ ಗ್ರಾಮೀಣ ಬ್ಯಾಂಕಿನ ಮುಖ್ಯ ಕಛೇರಿ ಬಳ್ಳಾರಿಯಲ್ಲಿದ್ದು, ಶಾಖಾ ಕಛೇರಿ ಎನ್.ಜಿ. ಹಳ್ಳಿ ಗ್ರಾಮ, ಹೊಳಲ್ಕೆರೆ ತಾಲ್ಲೂಕಿನಲ್ಲಿದೆ. ಪ್ರತಿವಾದಿಯು ವಾದಿ ಬ್ಯಾಂಕಿನಲ್ಲಿ ದಿನಾಂಕ 30.12.2017 ರಂದು ಹೊಳಲ್ಕೆರೆ ತಾಲ್ಲೂಕು, ಗೊಲ್ಲರಹಳ್ಳಿ ಗ್ರಾಮದ ಸರ್ವೇ ನಂ.8/18 ಬಿ ರ 3 ಎಕರೆ ಮತ್ತು ಸರ್ವೇ ನಂ.108 ರ 2 ಎಕರೆ ಜಮೀನಿನ ಕೃಷಿ ಉದ್ದೇಶಕ್ಕಾಗಿ ಸಾಲವನ್ನು ನೀಡುವಂತೆ ಕೋರಿದ್ದು, ವಾದಿ ಬ್ಯಾಂಕಿನವರು ಪ್ರತಿವಾದಿಯ ಮನವಿಯನ್ನು ಪರಿಗಣಿಸಿ, ಬ್ಯಾಂಕಿನ ನಿಬಂಧನೆಗೆ ಒಳಪಟ್ಟು, ಪ್ರತಿವಾದಿಯಿಂದ ವಾದಿ ಬ್ಯಾಂಕಿನ ಹೆಸರಿಗೆ ಅಗತ್ಯ ದಾಖಲಾತಿಗಳನ್ನು ಜಾರಿಮಾಡಿ ಕೊಂಡು ಹಾಗೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶನಗಳ ಮೇರೆಗೆ, ನಿಗದಿಪಡಿಸಿದ ಬಡ್ಡಿಯ ಪ್ರಕಾರ ಸಾಲವನ್ನು ನೀಡಲು ಒಪ್ಪಿರುತ್ತಾರೆ. ಪ್ರತಿವಾದಿಯು ಸದರಿ ಬ್ಯಾಂಕಿನ ನಿಬಂಧನೆಗಳಿಗೆ ಒಪ್ಪಿದ್ದು, ಅದರಂತೆ ವಾದಿ ಬ್ಯಾಂಕಿನವರು ಪ್ರತಿವಾದಿಗೆ ದಿನಾಂಕ 30.12.2017 ರಂದು ರೂ.3,90,000/- ಸಾಲವನ್ನು ಮಂಜೂರಾತಿ ಮಾಡಿದ್ದು, ಪ್ರತಿವಾದಿಯು ಸದರಿ ಸಾಲವನ್ನು ವಾರ್ಷಿಕ ಶೇಕಡ 13.25 ರ ಬಡ್ಡಿ ದರದಂತೆ ಸಾಲವನ್ನು ಮರುಪಾವತಿಸಲು ಒಪ್ಪಿರುತ್ತಾರೆ. ಪ್ರತಿವಾದಿಯು ದಿನಾಂಕ 30.12.2017 ರಂದು ವಾದಿ ಬ್ಯಾಂಕಿಗೆ ಪ್ರಗತಿ ಕೃಷ್ಣ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ನೀಡುವಂತೆ ಅರ್ಜಿಯನ್ನು ಕೊಟ್ಟಿರುತ್ತಾರೆ. ಪ್ರತಿವಾದಿಯು ದಿನಾಂಕ 30.12.2017 ರಂದು ವಾದಿ ಬ್ಯಾಂಕಿನ ಹೆಸರಿಗೆ ಸಾಲದ ಕರಾರು ಪತ್ರವನ್ನು ಜಾರಿಮಾಡಿಕೊಟ್ಟಿರುತ್ತಾರೆ. ಅಂತೆಯೆ ಪ್ರತಿವಾದಿಯು ಸದರಿ ಸಾಲವನ್ನು ನಿಯಮಿತವಾಗಿ ಮರುಪಾವತಿ ಮಾಡದಿದ್ದಲ್ಲಿ, ಸದರಿ ಸಾಲಕ್ಕೆ ವಾರ್ಷಿಕ ಶೇಕಡ 2 ರ ದಂಡದ ರೂಪದ ಬಡ್ಡಿಯನ್ನು ಪಾವತಿಸಲು ಒಪ್ಪಿರುತ್ತಾರೆ. ಪ್ರಸ್ತುತ ವಾದಿ ಬ್ಯಾಂಕು ವಾರ್ಷಿಕ ಶೇಕಡ 14.00 ಬಡ್ಡಿ ದರವನ್ನು ನಿಗದಿಪಡಿಸಿದೆ. ಪ್ರತಿವಾದಿಯು ಸಾಲವನ್ನು ಮರುಪಾವತಿಸುವ ಹೊಣೆಗಾರಿಕೆಯ ಕುರಿತಾಗಿ, ವಾದಿ ಬ್ಯಾಂಕಿನ ಪರವಾಗಿ ದಿನಾಂಕ 05.09.2020 ಮತ್ತು 18.08.2023 ರಂದು ಸಾಲದ ನವೀಕರಣದ ಕುರಿತಾಗಿ ದಾಖಲಾತಿಗಳನ್ನು ಜಾರಿಮಾಡಿಕೊಟ್ಟಿರುತ್ತಾರೆ. ಪ್ರತಿವಾದಿಯು ವಾದಿಯಿಂದ ಸಾಲ ಪಡೆದುಕೊಂಡ ನಂತರದಲ್ಲಿ, ಸದರಿ ಸಾಲವನ್ನು

ನಿಯಮಿತವಾಗಿ ಮತ್ತು ಕ್ರಮಬದ್ಧವಾಗಿ ಮರುಪಾವತಿಸಲು ವಿಫಲರಾಗಿರುತ್ತಾರೆ. ಹಾಗಾಗಿ ವಾದಿ ಬ್ಯಾಂಕಿನವರು ಪ್ರತಿವಾದಿಗೆ ನೋಟೀಸನ್ನು ನೀಡಿದ್ದಾಗ್ಯೂ ಕೂಡ, ಪ್ರತಿವಾದಿಯು ಸದರಿ ಸಾಲವನ್ನು ಮರುಪಾವತಿಸಲು ವಿಫಲರಾಗಿರುತ್ತಾರೆ. ಹಾಗಾಗಿ ಪ್ರತಿವಾದಿಯು ವಾದಿ ಬ್ಯಾಂಕಿಗೆ ರೂ.10,26,523/- ಸಾಲವನ್ನು ಪಾವತಿಸಲು ಬಾಧ್ಯಸ್ಥರಾಗಿರುತ್ತಾರೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕೆಂದು ಕೋರಿರುತ್ತಾರೆ.

3. ವಾದಿಯು ದಾವೆಯನ್ನು ಸಲ್ಲಿಸಿದ ನಂತರದಲ್ಲಿ, ಪ್ರತಿವಾದಿಗೆ ದಾವಾ ಸಮನ್ಸ್ ಜಾರಿಯಾಗಿದ್ದು, ಪ್ರತಿವಾದಿಯು ತನ್ನ ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇರುತ್ತದೆಃ-

ವಾದಿಯು ಸಲ್ಲಿಸಿರುವ ವಾದಪತ್ರದಲ್ಲಿನ ಅಂಶಗಳನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಅಲ್ಲಗಳೆದಿರುತ್ತಾರೆ. ವಾದಿಯು ಸಲ್ಲಿಸಿರುವಂತಹ ದಾವೆಗೆ ಯಾವುದೆ ವ್ಯಾಜ್ಯ ಕಾರಣ ಇರುವುದಿಲ್ಲ. ವಾದಿಯು ದಾವೆಯನ್ನು ಸಲ್ಲಿಸುವ ಸಲುವಾಗಿ, ತನ್ನ ಅನುಕೂಲಕ್ಕೆ ತಕ್ಕಂತೆ ವ್ಯಾಜ್ಯ ಕಾರಣವನ್ನು ಸೃಷ್ಟಿಸಿಕೊಂಡಿರುತ್ತಾರೆ. ವಾದಿಯು ಸಲ್ಲಿಸಿರುವಂತಹ ಮೌಲ್ಯಮಾಪನ ಪಟ್ಟಿ ಸಮರ್ಪಕವಾಗಿರುವುದಿಲ್ಲ. ವಾದಿಯು ಸಲ್ಲಿಸಿರುವಂತಹ ದಾವೆಯ ಕುರಿತಾಗಿ ಈ ನ್ಯಾಯಾಲಯಕ್ಕೆ ವಿಚಾರಣೆ ಮಾಡುವಂತಹ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಹಾಗಾಗಿ ವಾದಿಯು ಸಲ್ಲಿಸಿರು ವಂತಹ ದಾವೆಯು ಅನೂರ್ಜಿತಗೊಳ್ಳುತ್ತದೆ. ಪ್ರತಿವಾದಿಯು ವಾದಿ ಬ್ಯಾಂಕಿನಿಂದ ಕೃಷಿ ಉದ್ದೇಶಕ್ಕಾಗಿ ಸಾಲವನ್ನು ಪಡೆದಿರುತ್ತಾರೆ ಎಂಬುದನ್ನು ಒಪ್ಪಿರುತ್ತಾರೆ. ವಾದಿ ಬ್ಯಾಂಕಿನ ನಿಬಂಧನೆಯ ಮೇರೆಗೆ ಪ್ರತಿವಾದಿಯು ಸಾಲದ ಮೊತ್ತವನ್ನು ಪಾವತಿಸಲು ಸಿದ್ದರಿರುತ್ತಾರೆ. ಕಳೆದ 5-6 ವರ್ಷಗಳಿಂದ ಲಾಕ್ ಡೌನ್ ಇದ್ದ ಕಾರಣ ಮತ್ತು ಕಳೆದ 5-6 ವರ್ಷಗಳಿಂದ ಸರಿಯಾದ ರೀತಿಯಲ್ಲಿ ಮಳೆ ಬಾರದ ಕಾರಣ, ಪ್ರತಿವಾದಿಗೆ ವ್ಯವಸಾಯದ ಮೂಲದಿಂದ ಯಾವುದೆ ಆದಾಯ ಬಂದಿರುವುದಿಲ್ಲ. ಹಾಗಾಗಿ ಪ್ರತಿವಾದಿಗೆ ವ್ಯವಸಾಯದಿಂದ ನಷ್ಟ ಉಂಟಾಗಿರುತ್ತದೆ. ಪ್ರತಿವಾದಿಯು ಆತನ ಕುಟುಂಬವನ್ನು ನಿರ್ವಹಣೆ ಮಾಡಬೇಕಾಗಿದ್ದು, ಆದಾಗ್ಯೂ ಪ್ರತಿವಾದಿಗೆ ಯಾವುದೆ ಆದಾಯದ ಮೂಲ ಇರುವುದಿಲ್ಲ. ವಾದಿ ಬ್ಯಾಂಕಿನವರು ಉದಾರತೆಯನ್ನು

ತೋರಿದ್ದಲ್ಲಿ, ಪ್ರತಿವಾದಿಯು ಸಾಲದ ಕುರಿತು ರಾಜಿ ಮಾಡಿಕೊಂಡು ಸದರಿ ಸಾಲವನ್ನು ಮರುಪಾವತಿಸಲು ಸಿದ್ದರಿರುತ್ತಾರೆ. ಹಾಗಾಗಿ ಪ್ರತಿವಾದಿಯು ವಾದಿ ಬ್ಯಾಂಕಿನವರನ್ನು ಸಂಪರ್ಕಿಸಿ ಸಾಲವನ್ನು ಮರುಪಾವತಿಸಲು ಕಾಲಾವಕಾಶವನ್ನು ನೀಡುವಂತೆ ಕೋರಿದ್ದು, ವಾದಿ ಬ್ಯಾಂಕಿನವರು ಪ್ರತಿವಾದಿಗೆ ಯಾವುದೆ ಅವಕಾಶವನ್ನು ನೀಡಿರುವುದಿಲ್ಲ. ಅಂತೆಯೆ ಪ್ರತಿವಾದಿಯು ಪಡೆದಿರುವಂತಹ ಸಾಲದ ಕುರಿತು ಯಾವುದೆ ರಿಯಾಯಿತಿಯನ್ನು ಸಹ ನೀಡದೆ, ವಾದಿಯು ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯು ಈಗಲೂ ಸಹ ಸಾಲದ ಮೊತ್ತವನ್ನು ಮರುಪಾವತಿಸಲು ಸಿದ್ದರಿರುತ್ತಾರೆ. ಸಾಲದ ಮೊತ್ತವನ್ನು ಹೊರತುಪಡಿಸಿ, ವಾದಿ ಬ್ಯಾಂಕಿನವರು ಕೇಳಿರುವಂತೆ ಪ್ರತಿವಾದಿಗೆ ಬಡ್ಡಿಯನ್ನು ಪಾವತಿಸಲು ಯಾವುದೇ ಆದಾಯದ ಮೂಲ ಇರುವುದಿಲ್ಲ. ವಾದಿ ಬ್ಯಾಂಕಿನವರು ಆರ್.ಬಿ.ಐ. ನ ನಿರ್ದೇಶನಗಳನ್ನು ಮತ್ತು ನಿಬಂಧನೆಗಳನ್ನು ಉಲ್ಲಂಘನೆ ಮಾಡಿ, ಪ್ರತಿವಾದಿಯಿಂದ ಹೆಚ್ಚುವರಿಯಾದ ಮತ್ತು ವಿಪರೀತವಾದ ಬಡ್ಡಿಯನ್ನು ಕೇಳಿರುತ್ತಾರೆ. ಹಾಗಾಗಿ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ವಜಾಮಾಡಬೇಕೆಂದು ಕೋರಿರುತ್ತಾರೆ.

4. ಈ ಮೇಲ್ಕಾಣಿಸಿದ ಉಭಯ ಪಕ್ಷಗಾರರ ವಾದ-ಪ್ರತಿವಾದ ಪತ್ರಗಳಲ್ಲಿನ ಸಂಗತಿಗಳನ್ನು ಆಧರಿಸಿ, ನ್ಯಾಯಾಲಯವು ಈ ಕೆಳಗಿನಂತೆ ವಿವಾದಾಂಶಗಳನ್ನು ರೂಪಿಸಿರುತ್ತದೆ:-

1. ಪ್ರತಿವಾದಿಯು ಕೃಷಿ ಉದ್ದೇಶಕ್ಕಾಗಿ ವಾದಿ ಬ್ಯಾಂಕಿನಿಂದ ದಿನಾಂಕ 30.12.2017 ರಂದು ರೂ.3,90,000/- ಹಣವನ್ನು ಸಾಲವಾಗಿ ಪಡೆದಿರುತ್ತಾರೆಂದು ವಾದಿಯು ರುಜುವಾತುಪಡಿಸುವರೇ ?
2. ಪ್ರತಿವಾದಿಯು ದಿನಾಂಕ 30.12.2017 ರಂದು ಪಡೆದಂತಹ ಸಾಲದ ಮರುಪಾವತಿ ಕುರಿತಾಗಿ, ದಿನಾಂಕ 05.09.2020 ಮತ್ತು 18.08.2023 ರಂದು ಸಾಲದ ನವೀಕರಣದ ಕುರಿತಾಗಿ ವಾದಿ ಬ್ಯಾಂಕಿಗೆ ದಾಖಲಾತಿಗಳನ್ನು ಜಾರಿಮಾಡಿ ಕೊಟ್ಟಿರುತ್ತಾರೆಂದು ವಾದಿಯು ರುಜುವಾತುಪಡಿಸುವರೇ ?

3. ವಾದಿಯು ಪ್ರತಿವಾದಿಯ ಬಳಿ ಸಾಲವನ್ನು ಮರುಪಾವತಿಸುವಂತೆ ಕೇಳಿದ್ದು, ಆದಾಗ್ಯೂ ಪ್ರತಿವಾದಿಯು ಸಾಲವನ್ನು ಮಾರುಪಾವತಿ ಮಾಡಿಲ್ಲ ಎಂಬುದನ್ನು ವಾದಿಯು ರುಜುವಾತುಪಡಿಸುವರೆ?
4. ವಾದಿಯು ದಾವೆಯಲ್ಲಿ ಕೋರಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೇ?
5. ಹಾಗಿದ್ದರೆ ಯಾವ ಆದೇಶ ಅಥವಾ ಡಿಕ್ರಿ?

5. ಈ ಮೇಲ್ಕಂಡ ವಿವಾದಾಂಶಗಳಿಗೆ ಪೂರಕವಾಗಿ, ವಾದಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕರನ್ನು ಪಿ.ಡಬ್ಲೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 6 ರಂತೆ ದಾಖಲಾತಿಗಳನ್ನು ಹಾಜರುಪಡಿಸಿ ನಿಶಾನಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯ ಪರವಾಗಿ ಯಾವುದೇ ಮೌಖಿಕ ಮತ್ತು ದಾಖಲೆಗಳ ಸಾಕ್ಷ್ಯ ಮಾಡಿಸಿರುವುದಿಲ್ಲ.

6. ಉಭಯ ಪಕ್ಷಕಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

7. ಈ ಮೇಲ್ಕಾಣಿಸಿದ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ:

ವಿವಾದಾಂಶ ಸಂಖ್ಯೆ-1	:	ಸಕಾರಾತ್ಮಕವಾಗಿ,
ವಿವಾದಾಂಶ ಸಂಖ್ಯೆ-2	:	ಸಕಾರಾತ್ಮಕವಾಗಿ,
ವಿವಾದಾಂಶ ಸಂಖ್ಯೆ-3	:	ಸಕಾರಾತ್ಮಕವಾಗಿ,
ವಿವಾದಾಂಶ ಸಂಖ್ಯೆ-4	:	ಭಾಗಶಃ ಸಕಾರಾತ್ಮಕವಾಗಿ,
ವಿವಾದಾಂಶ ಸಂಖ್ಯೆ-5	:	ಅಂತಿಮ ಆದೇಶದಂತೆ.

ಕಾ ರ ಣ ಗ ಳು

8. ವಿವಾದಾಂಶ ಸಂಖ್ಯೆ-1 ರಿಂದ 4:- ಈ ನಾಲ್ಕು ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ನಾಲ್ಕು ವಿವಾದಾಂಶಗಳಿಗೆ ನೀಡುವಂತಹ ಕಾರಣಗಳು ಒಂದೇ ಆಗಿರುವುದರಿಂದ, ಈ ನಾಲ್ಕು ವಿವಾದಾಂಶಗಳನ್ನು ಒಟ್ಟಿಗೆ ಚರ್ಚಿಸಲಾಗುತ್ತದೆ. ಈ ಮೇಲ್ಕಂಡ ವಿವಾದಾಂಶಗಳ ಕುರಿತಾಗಿ

ವಾದಿಯು ತನ್ನ ವಾದಪತ್ರದಲ್ಲಿ, ವಾದಿ ಬ್ಯಾಂಕು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಕಾಯಿದೆ 1976ರ ನಿಯಮ 23(ಎ) ರ ಅಡಿಯಲ್ಲಿ ಕೆನರಾ ಬ್ಯಾಂಕಿನ ಪ್ರಾಯೋಜಕತ್ವದ ಅಡಿಯಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕು ಎಂದು ರೂಪಿತವಾಗಿರುತ್ತದೆ ಎಂದು ಉಲ್ಲೇಖಿಸಿರುತ್ತಾರೆ. ಪ್ರಾರಂಭಿಕ ಹಂತದಲ್ಲಿ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕು ಎಂಬ ಹೆಸರಿನಡಿಯಲ್ಲಿ ಕೆನರಾ ಬ್ಯಾಂಕಿನ ಪ್ರಾಯೋಜಕತ್ವದ ಅಡಿಯಲ್ಲಿ ಸ್ಥಾಪನೆಗೊಂಡಿದ್ದು, ಆ ನಂತರದಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕಿನೊಂದಿಗೆ ವಿಲೀನಗೊಂಡಿರುತ್ತದೆ. ಕರ್ನಾಟಕ ಗ್ರಾಮೀಣ ಬ್ಯಾಂಕಿನ ಮುಖ್ಯ ಕಛೇರಿ ಬಳ್ಳಾರಿಯಲ್ಲಿದ್ದು, ಶಾಖಾ ಕಛೇರಿ ಎನ್.ಜಿ. ಹಳ್ಳಿ ಗ್ರಾಮ, ಹೊಳಲ್ಕೆರೆ ತಾಲ್ಲೂಕಿನಲ್ಲಿದೆ. ಪ್ರತಿವಾದಿಯು ವಾದಿ ಬ್ಯಾಂಕಿನಲ್ಲಿ ದಿನಾಂಕ 30.12.2017 ರಂದು ಹೊಳಲ್ಕೆರೆ ತಾಲ್ಲೂಕು, ಗೊಲ್ಲರಹಳ್ಳಿ ಗ್ರಾಮದ ಸರ್ವೇ ನಂ.8/18 ಬಿ ರ 3 ಎಕರೆ ಮತ್ತು ಸರ್ವೇ ನಂ.108 ರ 2 ಎಕರೆ ಜಮೀನಿನಲ್ಲಿ ಬೆಳೆ ಬೆಳೆಯುವ ಉದ್ದೇಶಕ್ಕಾಗಿ ಸಾಲವನ್ನು ನೀಡುವಂತೆ ಕೋರಿದ್ದು, ವಾದಿ ಬ್ಯಾಂಕಿನವರು ಪ್ರತಿವಾದಿಯ ಮನವಿಯನ್ನು ಪರಿಗಣಿಸಿ, ಬ್ಯಾಂಕಿನ ನಿಬಂಧನೆಗೆ ಒಳಪಟ್ಟು, ಪ್ರತಿವಾದಿಯಿಂದ ವಾದಿ ಬ್ಯಾಂಕಿನ ಹೆಸರಿಗೆ ಅಗತ್ಯ ದಾಖಲಾತಿಗಳನ್ನು ಜಾರಿಮಾಡಿ ಕೊಡಲು ಹಾಗೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶನಗಳ ಮೇರೆಗೆ, ನಿಗದಿಪಡಿಸಿದ ಬಡ್ಡಿಯ ಪ್ರಕಾರ ಸಾಲವನ್ನು ನೀಡಲು ಒಪ್ಪಿರುತ್ತಾರೆ. ಪ್ರತಿವಾದಿಯು ಸದರಿ ಬ್ಯಾಂಕಿನ ನಿಬಂಧನೆಗಳಿಗೆ ಒಪ್ಪಿದ್ದು, ಅದರಂತೆ ವಾದಿ ಬ್ಯಾಂಕಿನವರು ಪ್ರತಿವಾದಿಗೆ ದಿನಾಂಕ 30.12.2017 ರಂದು ರೂ.3,90,000/- ಸಾಲವನ್ನು ಮಂಜೂರಾತಿ ಮಾಡಿದ್ದು, ಪ್ರತಿವಾದಿಯು ಸದರಿ ಸಾಲವನ್ನು ವಾರ್ಷಿಕ ಶೇಕಡ 13.25 ರ ಬಡ್ಡಿ ದರದಂತೆ ಸಾಲವನ್ನು ಮರುಪಾವತಿಸಲು ಒಪ್ಪಿರುತ್ತಾರೆ. ಪ್ರತಿವಾದಿಯು ದಿನಾಂಕ 30.12.2017 ರಂದು ವಾದಿ ಬ್ಯಾಂಕಿಗೆ ಪ್ರಗತಿ ಕೃಷ್ಣ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ನೀಡುವಂತೆ ಅರ್ಜಿಯನ್ನು ಕೊಟ್ಟಿರುತ್ತಾರೆ. ಪ್ರತಿವಾದಿಯು ದಿನಾಂಕ 30.12.2017 ರಂದು ವಾದಿ ಬ್ಯಾಂಕಿನ ಹೆಸರಿಗೆ ಸಾಲದ ಕರಾರು ಪತ್ರವನ್ನು ಜಾರಿಮಾಡಿಕೊಟ್ಟಿರುತ್ತಾರೆ. ಅಂತೆಯೆ ಪ್ರತಿವಾದಿಯು ಸದರಿ ಸಾಲವನ್ನು ನಿಯಮಿತವಾಗಿ ಮರುಪಾವತಿ ಮಾಡದಿದ್ದಲ್ಲಿ, ಸದರಿ ಸಾಲಕ್ಕೆ ವಾರ್ಷಿಕ ಶೇಕಡ 2ರ ದಂಡದ ರೂಪದ ಬಡ್ಡಿಯನ್ನು ಪಾವತಿಸಲು ಒಪ್ಪಿರುತ್ತಾರೆ. ಪ್ರಸ್ತುತ ವಾದಿ ಬ್ಯಾಂಕು ವಾರ್ಷಿಕ ಶೇಕಡ 14.00 ಬಡ್ಡಿ ದರವನ್ನು ನಿಗದಿಪಡಿಸಿದೆ.

ಪ್ರತಿವಾದಿಯು ಸಾಲವನ್ನು ಮರುಪಾವತಿಸುವ ಹೊಣೆಗಾರಿಕೆಯ ಕುರಿತಾಗಿ, ವಾದಿ ಬ್ಯಾಂಕಿನ ಪರವಾಗಿ ದಿನಾಂಕ 05.09.2020 ಮತ್ತು 18.08.2023 ರಂದು ಸಾಲದ ನವೀಕರಣದ ಕುರಿತಾಗಿ ದಾಖಲಾತಿಗಳನ್ನು ಜಾರಿಮಾಡಿಕೊಟ್ಟಿರುತ್ತಾರೆ. ಪ್ರತಿವಾದಿಯು ವಾದಿಯಿಂದ ಸಾಲ ಪಡೆದುಕೊಂಡ ನಂತರದಲ್ಲಿ, ಸದರಿ ಸಾಲವನ್ನು ನಿಯಮಿತವಾಗಿ ಮತ್ತು ಕ್ರಮಬದ್ಧವಾಗಿ ಮರುಪಾವತಿಸಲು ವಿಫಲರಾಗಿರುತ್ತಾರೆ. ಹಾಗಾಗಿ ವಾದಿ ಬ್ಯಾಂಕಿನವರು ಪ್ರತಿವಾದಿಗೆ ನೋಟೀಸನ್ನು ನೀಡಿದ್ದಾಗ್ಯೂ ಕೂಡ, ಪ್ರತಿವಾದಿಯು ಸದರಿ ಸಾಲವನ್ನು ಮರುಪಾವತಿಸಲು ವಿಫಲರಾಗಿರುತ್ತಾರೆ. ಹಾಗಾಗಿ ಪ್ರತಿವಾದಿಯು ವಾದಿ ಬ್ಯಾಂಕಿಗೆ ರೂ.10,26,523/- ಸಾಲವನ್ನು ಪಾವತಿಸಲು ಬಾಧ್ಯಸ್ಥರಾಗಿರುತ್ತಾರೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕೆಂದು ಕೋರಿರುತ್ತಾರೆ.

9. ಈ ಮೇಲ್ಕಂಡ ವಿವಾದಾಂಶಗಳ ಕುರಿತಾಗಿ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ, ಪ್ರತಿವಾದಿಯು ವಾದಿ ಬ್ಯಾಂಕಿನಿಂದ ಕೃಷಿ ಉದ್ದೇಶಕ್ಕಾಗಿ ಸಾಲವನ್ನು ಪಡೆದಿರುತ್ತಾರೆ ಎಂಬುದನ್ನು ಒಪ್ಪಿರುತ್ತಾರೆ. ವಾದಿ ಬ್ಯಾಂಕಿನ ನಿಬಂಧನೆಯ ಮೇರೆಗೆ ಪ್ರತಿವಾದಿಯು ಸಾಲದ ಮೊತ್ತವನ್ನು ಪಾವತಿಸಲು ಸಿದ್ದರಿರುತ್ತಾರೆಂದು ಹೇಳಿರುತ್ತಾರೆ. ಕಳೆದ 5-6 ವರ್ಷಗಳಿಂದ ಲಾಕ್ ಡೌನ್ ಇದ್ದ ಕಾರಣ ಮತ್ತು ಕಳೆದ 5-6 ವರ್ಷಗಳಿಂದ ಸರಿಯಾದ ರೀತಿಯಲ್ಲಿ ಮಳೆ ಬಾರದ ಕಾರಣ, ಪ್ರತಿವಾದಿಗೆ ವ್ಯವಸಾಯದ ಮೂಲದಿಂದ ಯಾವುದೆ ಆದಾಯ ಬಂದಿರುವುದಿಲ್ಲ. ಹಾಗಾಗಿ ಪ್ರತಿವಾದಿಗೆ ವ್ಯವಸಾಯದಿಂದ ನಷ್ಟ ಉಂಟಾಗಿರುತ್ತದೆ. ಪ್ರತಿವಾದಿಯು ಆತನ ಕುಟುಂಬವನ್ನು ನಿರ್ವಹಣೆ ಮಾಡಬೇಕಾಗಿದ್ದು, ಆದಾಗ್ಯೂ ಪ್ರತಿವಾದಿಗೆ ಯಾವುದೆ ಆದಾಯದ ಮೂಲ ಇರುವುದಿಲ್ಲ. ವಾದಿ ಬ್ಯಾಂಕಿನವರು ಉದಾರತೆಯನ್ನು ತೋರಿದ್ದಲ್ಲಿ, ಪ್ರತಿವಾದಿಯು ಸಾಲದ ಕುರಿತು ರಾಜಿ ಮಾಡಿಕೊಂಡು ಸದರಿ ಸಾಲವನ್ನು ಮರುಪಾವತಿಸಲು ಸಿದ್ದರಿರುತ್ತಾರೆ. ಹಾಗಾಗಿ ಪ್ರತಿವಾದಿಯು ವಾದಿ ಬ್ಯಾಂಕಿನವರನ್ನು ಸಂಪರ್ಕಿಸಿ ಸಾಲವನ್ನು ಮರುಪಾವತಿಸಲು ಕಾಲಾವಕಾಶವನ್ನು ನೀಡುವಂತೆ ಕೋರಿದ್ದು, ವಾದಿ ಬ್ಯಾಂಕಿನವರು ಪ್ರತಿವಾದಿಗೆ ಯಾವುದೆ ಅವಕಾಶವನ್ನು ನೀಡಿರುವುದಿಲ್ಲ. ಅಂತೆಯೆ ಪ್ರತಿವಾದಿಯು ಪಡೆದಿರುವಂತಹ ಸಾಲದ ಕುರಿತು ಯಾವುದೆ ರಿಯಾಯಿತಿಯನ್ನು ಸಹ ನೀಡದೆ

ವಾದಿಯು ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯು ಈಗಲೂ ಸಹ ಸಾಲದ ಮೊತ್ತವನ್ನು ಮರುಪಾವತಿಸಲು ಸಿದ್ದರಿರುತ್ತಾರೆ. ಸಾಲದ ಮೊತ್ತವನ್ನು ಹೊರತುಪಡಿಸಿ, ವಾದಿ ಬ್ಯಾಂಕಿನವರು ಕೇಳಿರುವಂತೆ ಪ್ರತಿವಾದಿಗೆ ಬಡ್ಡಿಯನ್ನು ಪಾವತಿಸಲು ಯಾವುದೇ ಆದಾಯದ ಮೂಲ ಇರುವುದಿಲ್ಲ. ವಾದಿ ಬ್ಯಾಂಕಿನವರು ಆರ್.ಬಿ.ಐ. ನ ನಿರ್ದೇಶನಗಳನ್ನು ಮತ್ತು ನಿಬಂಧನೆಗಳನ್ನು ಉಲ್ಲಂಘನೆ ಮಾಡಿ, ಪ್ರತಿವಾದಿಯಿಂದ ಹೆಚ್ಚುವರಿ ಮತ್ತು ವಿಪರೀತವಾದ ಬಡ್ಡಿಯನ್ನು ಕೇಳಿರುತ್ತಾರೆ. ಹಾಗಾಗಿ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ವಜಾಮಾಡಬೇಕೆಂದು ಕೋರಿರುತ್ತಾರೆ.

10. ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯ ವಿರುದ್ದ ಹಣದ ವಸೂಲಾತಿಗಾಗಿ ಸಲ್ಲಿಸಿದ್ದು, ಹಾಗಾಗಿ ಈ ಮೇಲ್ಕಂಡ ವಿವಾದಾಂಶ ಸಂಖ್ಯೆ-1 ರಿಂದ 4 ನ್ನು ರುಜುವಾತುಪಡಿಸುವಂತಹ ಹೊಣೆಗಾರಿಕೆ ವಾದಿಯದ್ದೆ ಆಗಿರುತ್ತದೆ. ಆದ್ದರಿಂದ ಈ ಕುರಿತಾಗಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ರಿಂದ 103 ರವರೆಗಿನ ಪರಿಕಲ್ಪನೆಗಳನ್ನು ಪರಿಶೀಲಿಸುವ ಅಗತ್ಯತೆ ಇರುತ್ತದೆ. ಸದರಿ ಕಾನೂನಿನ ಪರಿಕಲ್ಪನೆಗಳನ್ನು ಪರಿಶೀಲಿಸಿದಾಗ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ರಂತೆ ಯಾವುದೇ ಒಂದು ವಾಸ್ತವಾಂಶದ ಅಸ್ತಿತ್ವವನ್ನು ಸಾಬೀತುಪಡಿಸು ವಂತಹ ಬಾಧ್ಯತೆಯನ್ನು ಯಾವ ವ್ಯಕ್ತಿಯು ಹೊಂದಿರುತ್ತಾನೋ ಅಂತಹ ವ್ಯಕ್ತಿಯೇ ಸದರಿ ವಾಸ್ತವಾಂಶವನ್ನು ಸಾಬೀತುಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾ ನೆಂದು ಸ್ಪಷ್ಟವಾಗಿ ಉಲ್ಲೇಖ ಇರುತ್ತದೆ. ಅಂತೆಯೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 102 ರಂತೆ ಯಾವುದೇ ಒಂದು ಪ್ರಕರಣದಲ್ಲಿ ಉಭಯ ಪಕ್ಷಗಾರರು ಕೂಡ ಸಾಕ್ಷ್ಯವನ್ನು ಒದಗಿಸದಂತಹ ಸಂದರ್ಭದಲ್ಲಿ ಸೋಲುವ ವ್ಯಕ್ತಿಯ ಮೇಲೆ ರುಜುವಾತಿನ ಭಾರ ಇರುತ್ತದೆ ಎಂದು ಸ್ಪಷ್ಟೀಕರಣಗೊಂಡಿರುತ್ತದೆ. ಅಂತೆಯೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 103 ರಂತೆ ಯಾವುದೇ ಒಂದು ವಾಸ್ತವಿಕತೆಯ ಕುರಿತು ಸಾಬೀತು ಪಡಿಸುವಂತಹ ಹೊಣೆಗಾರಿಕೆಯು ಯಾವ ನಿರ್ದಿಷ್ಟ ವ್ಯಕ್ತಿಯ ಮೇಲೆ ಇರುತ್ತದೆಯೋ, ಅಂತಹ ವ್ಯಕ್ತಿ ಸದರಿ ವಾಸ್ತವಿಕತೆಯನ್ನು ಸಾಬೀತುಪಡಿಸಬೇಕೆಂದು ಇದ್ದು, ಒಂದೊಮ್ಮೆ ಯಾವುದೇ ಒಂದು ಕಾನೂನಿನ ಮೂಲಕ ಅಂತಹ ವಾಸ್ತವಾಂಶವನ್ನು ಸಾಬೀತು ಪಡಿಸುವ ಅಗತ್ಯತೆ ಇಲ್ಲ ಎಂದು

ಹೇಳದ ಹೊರತು ನ್ಯಾಯಾಲಯವು ಅದರ ಅಸ್ತಿತ್ವವನ್ನು ನಂಬಬೇಕೆಂದು ಕೋರುವ ವ್ಯಕ್ತಿಯ ಮೇಲೆಯೇ ಸಾಬೀತುಪಡಿಸುವ ಹೊಣೆಗಾರಿಕೆ ಇರುತ್ತದೆ ಎಂದು ಉಲ್ಲೇಖಿಸಿರುತ್ತದೆ.

11. ಈ ಮೇಲ್ಕಂಡ ವಿವಾದಾಂಶಗಳ ಕುರಿತು ವಾದಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕರನ್ನು ಪಿ.ಡಬ್ಲೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ವಾದಪತ್ರದಲ್ಲಿನ ಅಂಶಗಳನ್ನು ತನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ಪುನರುಚ್ಚರಿಸಿದ್ದಾರೆ. ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 6 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ನಿಪಿ-1 ರಂತೆ ಪ್ರತಿವಾದಿಯು ವಾದಿ ಬ್ಯಾಂಕಿನಲ್ಲಿ ದಿನಾಂಕ 30.12.2017 ರಂದು ಬೆಳೆ ಬೆಳೆಯುವ ಉದ್ದೇಶಕ್ಕಾಗಿ ರೂ.3,90,000/- ಸಾಲವನ್ನು ಮಂಜೂರಾತಿ ಮಾಡುವಂತೆ ನೀಡಿರುವ ಸಾಲದ ಅರ್ಜಿಯನ್ನು ಹಾಜರುಪಡಿಸಿರುತ್ತಾರೆ. ನಿಪಿ-2 ರಂತೆ ಪ್ರತಿವಾದಿಯು ವಾದಿ ಬ್ಯಾಂಕಿಗೆ ದಿನಾಂಕ 30.12.2017 ರಂದು ಕಿಸಾನ್ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ಪಡೆಯುವ ಕುರಿತಾಗಿ ನೀಡಿರುವ ಅರ್ಜಿಯನ್ನು ಹಾಜರುಪಡಿಸಿರುತ್ತಾರೆ. ನಿಪಿ-3 ರಂತೆ ಪ್ರತಿವಾದಿಯು ದಿನಾಂಕ 30.12.2017 ರಂದು ವಾದಿ ಬ್ಯಾಂಕಿನಿಂದ ಪಡೆದಂತಹ ಸಾಲದ ಕುರಿತಾಗಿ ಜಾರಿಮಾಡಿಕೊಟ್ಟಂತಹ ಕೃಷಿ ಸಾಲದ ಕರಾರು ಪತ್ರವನ್ನು ಹಾಜರುಪಡಿಸಿರುತ್ತಾರೆ. ನಿಪಿ-4 ಮತ್ತು 5 ರಂತೆ ಪ್ರತಿವಾದಿಯು ಸಾಲವನ್ನು ಮರುಪಾವತಿಸುವ ಹೊಣೆಗಾರಿಕೆಯ ಕುರಿತಾಗಿ, ವಾದಿ ಬ್ಯಾಂಕಿನ ಪರವಾಗಿ ದಿನಾಂಕ 05.09.2020 ಮತ್ತು 18.08.2023 ರಂದು ಜಾರಿಮಾಡಿಕೊಟ್ಟಂತಹ ಸಾಲದ ನವೀಕರಣದ ಕುರಿತಾದ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ನಿಪಿ-6 ರಂತೆ ಪ್ರತಿವಾದಿಗೆ ಸಂಬಂಧಿಸಿದ ಸಾಲದ ಎಕ್ಸಟ್ರಾಕ್ಟನ್ನು ಹಾಜರುಪಡಿಸಿರುತ್ತಾರೆ.

12. ಈ ಮೇಲ್ಕಂಡ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಪ್ರತಿವಾದಿಯು ನಿಪಿ-1 ರಂತೆ ವಾದಿ ಬ್ಯಾಂಕಿನಿಂದ ದಿನಾಂಕ 30.12.2017 ರಂದು ರೂ.3,90,000/- ಸಾಲವನ್ನು ಪಡೆಯುವ ಸಲುವಾಗಿ ಅರ್ಜಿಯನ್ನು ನೀಡಿರುವುದು ಕಂಡುಬರುತ್ತದೆ. ಅಂತೆಯೆ ಪ್ರತಿವಾದಿಯು ವಾದಿ ಬ್ಯಾಂಕಿನಿಂದ ಪಡೆದಂತಹ ಸಾಲದ ಕುರಿತಾಗಿ ವಾದಿ ಬ್ಯಾಂಕಿನ ಹೆಸರಿಗೆ ನಿಪಿ-3 ರಂತೆ ಕೃಷಿ ಸಾಲದ ಕರಾರು ಪತ್ರವನ್ನು

ಜಾರಿಮಾಡಿಕೊಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮುಂದುವರೆದು ವಾದಿ ಬ್ಯಾಂಕಿನವರು ಪ್ರತಿವಾದಿಯ ಬಳಿ ಸಾಲವನ್ನು ಮಂಜೂರಾತಿ ಮಾಡುವಂತೆ ಕೇಳಿದಾಗ, ಪ್ರತಿವಾದಿಯು ವಾದಿ ಬ್ಯಾಂಕಿನ ಹೆಸರಿಗೆ ಸಾಲದ ಮರುಪಾವತಿಯ ಕುರಿತಾಗಿ, ನಿಪಿ-4 ಮತ್ತು 5 ರಂತೆ ಸಾಲದ ನವೀಕರಣದ ಕುರಿತಾದ ದಾಖಲಾತಿ ಗಳನ್ನು ಜಾರಿಮಾಡಿಕೊಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಈ ಮೇಲ್ಕಂಡ ದಾಖಲಾತಿಗಳ ಕುರಿತಾಗಿ ಪ್ರಾರಂಭಿಕ ಹಂತದಲ್ಲಿ ವಾದಿಯ ಪರವಾಗಿ ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

13. ಈ ಮೇಲ್ಕಂಡ ವಿವಾದಾಂಶಗಳ ಕುರಿತು ಪ್ರತಿವಾದಿಯ ಪರ ವಕೀಲರು ಪಿ.ಡಬ್ಲೂ-1 ರವರನ್ನು ಪಾಟೀ ಸವಾಲು ಮಾಡಿದ್ದು, ಸದರಿ ಸಾಕ್ಷಿದಾರರು ತನ್ನ ಪಾಟೀ ಸವಾಲಿನಲ್ಲಿ, ಸಾಲವನ್ನು ಮಂಜೂರಾತಿ ಮಾಡುವ ಪೂರ್ವದಲ್ಲಿ ಜಮೀನಿನ ಕುರಿತಾದ ದಾಖಲಾತಿಗಳನ್ನು ಪರಿಶೀಲಿಸಿ, ಸ್ಥಳ ಪರಿಶೀಲನೆ ಮಾಡಿ, ಸಾಲವನ್ನು ಮಂಜೂರಾತಿ ಮಾಡುತ್ತೇವೆ ಎಂಬುದನ್ನು ಒಪ್ಪಿರುತ್ತಾರೆ. ತಾವು ಪ್ರತಿವಾದಿಗೆ ಸಾಲವನ್ನು ಮಂಜುರಾತಿ ಮಾಡುವ ಸಮಯದಲ್ಲಿ ಪ್ರತಿವಾದಿಯ ಜಮೀನಿನಲ್ಲಿ ಅಡಿಕೆ ಬೆಳೆ ಬೆಳೆದಿದ್ದರು ಎಂದು ನುಡಿದಿರುತ್ತಾರೆ. ಸಾಲವನ್ನು ಮಂಜೂರಾತಿ ಮಾಡುವ ಸಮಯದಲ್ಲಿ ಸಾಲಗಾರರಿಂದ ಕೆಲವೊಂದು ಮೊತ್ತದ ಕುರಿತು ನಿಶ್ಚಿತ ಠೇವಣಿ ಮಾಡಿಕೊಳ್ಳುತ್ತೇವೆ ಎಂಬುದನ್ನು ಒಪ್ಪಿರುತ್ತಾರೆ. ಸಾಲಗಾರರು ಸಾಲ ಮರುಪಾವತಿ ಮಾಡದಿದ್ದಲ್ಲಿ, ನಿಶ್ಚಿತ ಠೇವಣಿ ಮೊತ್ತವನ್ನು ಸಾಲಕ್ಕೆ ಮುಟ್ಟುಗೋಲು ಹಾಕಿಕೊಳ್ಳುತ್ತೇವೆ ಎಂಬುದನ್ನು ಒಪ್ಪಿರುತ್ತಾರೆ. ಈ ಪ್ರಕರಣದ ಪ್ರತಿವಾದಿಯಿಂದ ರೂ.20,000/- ಮೊತ್ತವನ್ನು ನಿಶ್ಚಿತ ಠೇವಣಿ ಮಾಡಿಕೊಂಡಿದ್ದು, ಸದರಿ ಹಣವನ್ನು ಪ್ರತಿವಾದಿಯ ಸಾಲಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದೇವೆ ಎಂಬುದನ್ನು ಒಪ್ಪಿರುತ್ತಾರೆ. ಪ್ರತಿವಾದಿಯು ಪಡೆದಿರುವಂತಹ ಸಾಲದ ಕುರಿತು ಬಡ್ಡಿಯಲ್ಲಿ ರಿಯಾಯಿತಿ ನೀಡಿದ್ದಲ್ಲಿ, ಸಾಲವನ್ನು ಮತ್ತು ರಿಯಾಯಿತಿ ಬಡ್ಡಿಯನ್ನು ಪಾವತಿಸಲು ಸಿದ್ಧರಿರುತ್ತಾರೆ ಎಂಬ ಪ್ರಶ್ನೆಗೆ, ಸಾಕ್ಷಿಯು ಬ್ಯಾಂಕಿನಲ್ಲಿ ಪರಿಶೀಲನೆ ಮಾಡಿ ಹೇಳಬೇಕು ಎಂದು ಹೇಳಿರುತ್ತಾರೆ.

14. ಈ ಮೇಲ್ಕಂಡ ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನ ಅಂಶಗಳನ್ನು ಪರಿಶೀಲಿಸಲಾಗಿ, ಪ್ರತಿವಾದಿಯ ಪರ ವಕೀಲರು ಪಿ.ಡಬ್ಲ್ಯೂ-1 ರವರನ್ನು ಪಾಟೀ ಸವಾಲು ಮಾಡಿದ್ದಾಗ್ಯೂ ನಿಪಿ-1 ರಿಂದ 6 ರ ದಾಖಲಾತಿಗಳನ್ನು ಅಲ್ಲಗಳೆಯ ಬಹುದಾದ ಯಾವುದೇ ಅಂಶಗಳನ್ನು ಕೂಡ ಪ್ರಶ್ನಿಸಿರುವುದು ಕಂಡುಬಂದಿರುವುದಿಲ್ಲ. ಹಾಗಾಗಿ ನಿಪಿ-1 ರಿಂದ 6 ರ ಕುರಿತಾಗಿ ವಾದಿ ಬ್ಯಾಂಕಿನ ಪರವಾಗಿ ಪೂರ್ವಭಾವನೆ ಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಅಂತಯೆ ಪ್ರತಿವಾದಿಯ ಪರ ವಕೀಲರ ನಿಲುವುಗಳ ಕುರಿತು ಪರಿಶೀಲಿಸಲಾಗಿ, ಪ್ರತಿವಾದಿಯು ವಾದಿ ಬ್ಯಾಂಕಿನಿಂದ ರೂ.3,90,000/- ಸಾಲವನ್ನು ಪಡೆದಿರುತ್ತಾರೆ ಎಂಬುದರ ಕುರಿತು ಪರಿಗಣಿಸಬಹುದಾದ ಅಂಶಗಳು ಕಂಡುಬರುತ್ತವೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

15. ಈ ಮೇಲ್ಕಂಡಂತೆ ಉಭಯ ಪಕ್ಷಗಾರರ ವಾದ ಪ್ರತಿವಾದ ಪತ್ರ ಮತ್ತು ವಾದಿಯ ಪರ ಮೌಖಿಕ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ವಾದಿಯು ಸಲ್ಲಿಸಿರುವ ವಾದಪತ್ರದಲ್ಲಿ, ಪ್ರತಿವಾದಿಯು ದಿನಾಂಕ 30.12.2017 ರಂದು ವಾದಿಯಿಂದ ಕೃಷಿ ಉದ್ದೇಶಕ್ಕಾಗಿ ರೂ.3,90,000/- ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು ವಾರ್ಷಿಕ ಶೇಕಡ 13.25 ರ ಬಡ್ಡಿ ದರದಂತೆ ಮರುಪಾವತಿಸುವುದಾಗಿ ಒಪ್ಪಿ, ವಾದಿ ಬ್ಯಾಂಕಿನ ಹೆಸರಿಗೆ ದಾಖಲಾತಿಗಳನ್ನು ಜಾರಿಮಾಡಿಕೊಟ್ಟಿರುತ್ತಾರೆ ಎಂದು ಉಲ್ಲೇಖಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ, ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಪರಿಶೀಲಿಸಲಾಗಿ, ಪ್ರತಿವಾದಿಯು ವಾದಿ ಬ್ಯಾಂಕಿನಿಂದ ಕೃಷಿ ಉದ್ದೇಶಕ್ಕಾಗಿ ಸಾಲವನ್ನು ಪಡೆದಿರುತ್ತಾರೆ ಎಂಬುದನ್ನು ಒಪ್ಪಿರುತ್ತಾರೆ. ಅಂತೆಯೆ ವಾದಿ ಬ್ಯಾಂಕಿನ ನಿಬಂಧನೆಯ ಮೇರೆಗೆ ಪ್ರತಿವಾದಿಯು ಸಾಲದ ಮೊತ್ತವನ್ನು ಪಾವತಿಸಲು ಸಿದ್ದರಿರುತ್ತಾರೆಂದು ಹೇಳಿರುತ್ತಾರೆ. ಈ ಮೇಲ್ಕಂಡ ಉಲ್ಲೇಖಗಳ ಕುರಿತಾಗಿ ಕಾನೂನಿನ ಅಂಶಗಳನ್ನು ಪರಿಶೀಲಿಸಲಾಗಿ, ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 58 ರ ಅಡಿಯಲ್ಲಿ ಸಮ್ಮತಿಸಲಾದಂತಹ ವಾಸ್ತವಾಂಶದ ಕುರಿತು ಸಾಬೀತು ಮಾಡುವಂತಹ ಅಗತ್ಯತೆ ಇಲ್ಲ ಎಂದು ಉಲ್ಲೇಖಿಸಿರುತ್ತದೆ. ಈ ಮೇಲ್ಕಂಡ ಕಾನೂನಿನ ಅಂಶಗಳನ್ನು ಪರಿಶೀಲಿಸಲಾಗಿ, ಯಾವುದೇ ಒಂದು ವಾಸ್ತವಾಂಶದ ಕುರಿತು ಸದರಿ ದಾವೆಯ ಪಕ್ಷಗಾರರು

ವಿಚಾರಣೆಯ ಕಾಲಕ್ಕೆ ಸಮ್ಮತಿಸಿದ್ದಲ್ಲಿ ಅಥವಾ ಅಂತಹ ವಾಸ್ತವಾಂಶದ ಕುರಿತು, ವಿಚಾರಣೆಯ ಪೂರ್ವದಲ್ಲಿ ಲಿಖಿತ ಸಮ್ಮತಿಯನ್ನು ನೀಡಿದ್ದಲ್ಲಿ, ಅಂತಹ ವಾಸ್ತವಾಂಶದ ಕುರಿತು ಸಾಬೀತು ಮಾಡುವಂತಹ ಅಗತ್ಯತೆ ಇಲ್ಲ ಎಂದು ಉಲ್ಲೇಖಿಸಿರುತ್ತದೆ. ಈ ಮೇಲ್ಕಂಡ ಕಾನೂನಿನ ಅಂಶಗಳ ಹಿನ್ನಲೆಯಲ್ಲಿ ಪ್ರತಿವಾದಿಯು ಸಲ್ಲಿಸಿರುವಂತಹ ಪ್ರತಿವಾದ ಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ, ಪ್ರತಿವಾದಿಯು ವಾದಿ ಬ್ಯಾಂಕಿನಿಂದ ಕೃಷಿ ಉದ್ದೇಶಕ್ಕಾಗಿ ಸಾಲವನ್ನು ಪಡೆದಿರುತ್ತಾರೆ ಎಂಬುದನ್ನು ಹಾಗೂ ಸದರಿ ಸಾಲವನ್ನು ವಾದಿ ಬ್ಯಾಂಕಿನ ನಿಬಂಧನೆಯ ಮೇರೆಗೆ ಪ್ರತಿವಾದಿಯು ಪಾವತಿಸಲು ಸಿದ್ದರಿರುತ್ತಾರೆ ಎಂದು ಒಪ್ಪಿಕೊಂಡಿರುವುದು ಕಂಡುಬರುತ್ತದೆ. ಹಾಗಾಗಿ ಈ ಮೇಲ್ಕಂಡ ಒಪ್ಪಿತ ಅಂಶಗಳ ಆಧಾರದಲ್ಲಿ ಮೇಲ್ಕಂಡ ವಿವಾದಾಂಶಗಳ ಕುರಿತು ವಾದಿಯ ಪರವಾಗಿ ಪೂರ್ವ ಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

16. ಈ ಮೇಲ್ಕಂಡ ವಿವಾದಾಂಶಗಳ ಕುರಿತಾಗಿ ವಾದಿಯ ಪರ ಸಾಕ್ಷ್ಯವನ್ನು ಪರಿಶೀಲಿಸಿದ ನಂತರದಲ್ಲಿ, ಸದರಿ ವಿವಾದಾಂಶಗಳ ಕುರಿತು ಪ್ರತಿವಾದಿಯು ಸಾಕ್ಷ್ಯ ಮಾಡಿಸಿರುವ ಬಗ್ಗೆ ಪರಿಶೀಲಿಸಲಾಗಿ, ಪ್ರತಿವಾದಿಯು ತನ್ನ ಪರವಾಗಿ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ. ಯಾವುದೇ ಒಂದು ದಾವೆಯಲ್ಲಿ ಪ್ರತಿವಾದಿಯು ನಿಲುವನ್ನು ತೆಗೆದುಕೊಂಡಿದ್ದಲ್ಲಿ, ಆ ಕುರಿತು ತಾನು ತೆಗೆದು ಕೊಂಡಂತಹ ನಿಲುವನ್ನು ಸಾಬೀತುಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ಒಂದೊಮ್ಮೆ ಪ್ರತಿವಾದಿಯು ತೆಗೆದುಕೊಂಡಂತಹ ನಿಲುವುಗಳನ್ನು ಸಾಬೀತುಪಡಿಸಲು ವಿಫಲವಾದಲ್ಲಿ, ಆ ಕುರಿತಾಗಿ ಸದರಿಯವರ ನಿಲುವುಗಳಿಗೆ ವ್ಯತಿರಿಕ್ತವಾಗಿ ಪೂರ್ವಭಾವನೆ ಮಾಡಲಾಗುತ್ತದೆ. ಈ ಕುರಿತಾಗಿ ನ್ಯಾಯಾಲಯವು ಈ ಕೆಳಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿರುತ್ತದೆ:-

AIR 1999 Supreme Court 1441

Vidhyadhar Vs. Mankikrao and another

"(A) Evidence Act (1 of 1872), S. 114 – Adverse inference- Party to suit – Not entering the witness box – Give rise to interference adverse against him.

> Where a party to the suit does not appear into the witness box and states his own case on oath and does not offer himself to be cross examined by the other side, a presumption would arise that the case set up by him is not correct."

17. ಈ ಮೇಲ್ಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಪಾತವನ್ನು ಪರಿಗಣಿಸಲಾಗಿ, ಯಾವುದೇ ಒಂದು ದಾವೆಯಲ್ಲಿ ಪ್ರತಿವಾದಿಯು ನಿಲುವುಗಳನ್ನು ತೆಗೆದುಕೊಂಡಾಗ ಅಂತಹ ನಿಲುವುಗಳನ್ನು ಸಾಬೀತುಪಡಿಸುವ ಕುರಿತಾಗಿ ನ್ಯಾಯಾಲಯದಲ್ಲಿ ಹಾಜರಾಗಿ ಸಾಕ್ಷ್ಯ ನೀಡದಿದ್ದಲ್ಲಿ ಹಾಗೂ ಪಾಟೀ ಸವಾಲಿಗೆ ಒಳಪಡದಿದ್ದಲ್ಲಿ ಅಂತಹ ನಿಲುವುಗಳ ಕುರಿತಾಗಿ ಪೂರ್ವಭಾವನೆಯನ್ನು ಮಾಡಲು ಬರುವುದಿಲ್ಲ ಎಂದು ನಿರ್ಣಯಿಸಿರುತ್ತದೆ. ಈ ಮೇಲ್ಕಂಡ ತೀರ್ಪಿನ ಅನುಪಾತವನ್ನು ಪ್ರಸ್ತುತ ಪ್ರಕರಣದ ವಸ್ತುಸ್ಥಿತಿಗೆ ಅನ್ವಯಿಸಲಾಗಿ, ವಾದಿಯು ಪ್ರಸ್ತುತ ಈ ದಾವೆಯಲ್ಲಿ ಪ್ರತಿವಾದಿಯ ವಿರುದ್ಧ ಹಣದ ವಸೂಲಾತಿಗಾಗಿ ದಾವೆಯನ್ನು ಸಲ್ಲಿಸಿದ್ದು, ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ, ಪ್ರತಿವಾದಿಯು ಈಗಲೂ ಸಹ ಸಾಲದ ಮೊತ್ತವನ್ನು ಮರುಪಾವತಿಸಲು ಸಿದ್ದರಿದ್ದು, ಸಾಲದ ಮೊತ್ತವನ್ನು ಹೊರತುಪಡಿಸಿ, ವಾದಿ ಬ್ಯಾಂಕಿನವರು ಕೇಳಿರುವಂತೆ ಪ್ರತಿವಾದಿಗೆ ಬಡ್ಡಿಯನ್ನು ಪಾವತಿಸಲು ಯಾವುದೇ ಆದಾಯದ ಮೂಲ ಇರುವುದಿಲ್ಲ ಎಂದು ಹೇಳಿರುತ್ತಾರೆ. ವಾದಿ ಬ್ಯಾಂಕಿನವರು ಆರ್.ಬಿ.ಐ. ನ ನಿರ್ದೇಶನಗಳನ್ನು ಮತ್ತು ನಿಬಂಧನೆಗಳನ್ನು ಉಲ್ಲಂಘನೆ ಮಾಡಿ, ಪ್ರತಿವಾದಿಯಿಂದ ಹೆಚ್ಚುವರಿಯಾದ ಮತ್ತು ವಿಪರೀತವಾದ ಬಡ್ಡಿಯನ್ನು ಕೇಳಿರುತ್ತಾರೆಂದು ಉಲ್ಲೇಖಿಸಿರುತ್ತಾರೆ. ಈ ಮೇಲ್ಕಂಡ ಪ್ರತಿವಾದ ಪತ್ರದಲ್ಲಿನ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ಪ್ರತಿವಾದಿಯು ತನ್ನ ಪರವಾಗಿ ಸಾಕ್ಷ್ಯ ಮಾಡಿಸಿರುವುದಿಲ್ಲ. ಹಾಗಾಗಿ ವಾದಿ ಬ್ಯಾಂಕಿನವರು ಆರ್.ಬಿ.ಐ.ನ ನಿರ್ದೇಶನಗಳನ್ನು ಮತ್ತು ನಿಬಂಧನೆಗಳನ್ನು ಉಲ್ಲಂಘನೆ ಮಾಡಿ, ಪ್ರತಿವಾದಿಯಿಂದ ಹೆಚ್ಚುವರಿಯಾಗಿ ಮತ್ತು ವಿಪರೀತವಾಗಿ ಬಡ್ಡಿಯನ್ನು ಕೇಳಿರುತ್ತಾರೆ ಎಂಬುದರ ಕುರಿತು ಪರಿಗಣಿಸಲು ಬರುವುದಿಲ್ಲ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

18. ವಾದಿಯು ಪ್ರಸ್ತುತ ಈ ದಾವೆಯಲ್ಲಿ ಪ್ರತಿವಾದಿಯ ವಿರುದ್ಧ, ದಿನಾಂಕ 30.12.2017 ರಂದು ಪ್ರತಿವಾದಿಯು ವಾದಿ ಬ್ಯಾಂಕಿನಿಂದ ಕೃಷಿ ಉದ್ದೇಶಕ್ಕಾಗಿ ಪಡೆದಂತಹ ರೂ.3,90,000/- ಸಾಲವನ್ನು ಮತ್ತು ಸದರಿ ಸಾಲದ ಕುರಿತಾಗಿ ವಾರ್ಷಿಕ ಶೇಕಡ ರೂ 13.25 ರಂತೆ ಬಡ್ಡಿಸಹಿತ ಹಣವನ್ನು ವಸೂಲಾತಿ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಈ ಕುರಿತು ಈಗಾಗಲೇ ಮೇಲ್ಕಂಡಂತೆ ನಿರ್ಣಯಿಸಲಾಗಿ, ಪ್ರತಿವಾದಿಯು ವಾದಿಯಿಂದ ದಿನಾಂಕ 30.12.2017 ರಂದು ರೂ.3,90,000/- ಸಾಲವನ್ನು ಪಡೆದುಕೊಂಡಿರುತ್ತಾರೆ ಎಂಬುದು ರುಜುವಾತಾಗಿರುತ್ತದೆ. ಅಂತೆಯೆ ವಾದಿಯು ಹಾಜರುಪಡಿಸಿರುವಂತಹ ನಿಪಿ-6 ರ ದಾಖಲಾತಿಯನ್ನು ಪರಿಶೀಲಿಸಲಾಗಿ, ಪ್ರತಿವಾದಿಯು ವಾದಿ ಬ್ಯಾಂಕಿನಿಂದ ಪಡೆದಂತಹ ಸಾಲವನ್ನು ಮರುಪಾವತಿ ಮಾಡದಿರುವುದು ಕಂಡುಬರುತ್ತದೆ. ಹಾಗಾಗಿ ವಾದಿಯು ದಾವೆಯಲ್ಲಿ ಕೋರಿರುವಂತೆ ರೂ.10,26,523/- ಹಣವನ್ನು ಮತ್ತು ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಸಾಲವನ್ನು ಮರುಪಾವತಿ ಮಾಡುವ ದಿನಾಂಕದವರೆಗೆ ರೂ.3,90,000/- ಸಾಲದ ಮೊತ್ತಕ್ಕೆ ವಾರ್ಷಿಕ ಶೇಕಡ 6 ರಂತೆ ಬಡ್ಡಿಯನ್ನು ಪಡೆಯಲು ಅರ್ಹರಿರುತ್ತಾರೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಆದ್ದರಿಂದ ಈ ಮೇಲ್ಕಂಡ ವಿವಾದಾಂಶ ಸಂಖ್ಯೆ-1 ರಿಂದ 3 ನ್ನು ಸಕಾರಾತ್ಮಕವೆಂದು ಮತ್ತು ವಿವಾದಾಂಶ ಸಂಖ್ಯೆ-4 ನ್ನು ಭಾಗಶಃ ಸಕಾರಾತ್ಮಕವೆಂದು ನಿರ್ಣಯಿಸಲಾಗಿದೆ.

19. ವಿವಾದಾಂಶ ಸಂಖ್ಯೆ-5:- ಈ ಮೇಲ್ಕಂಡ ವಿವಾದಾಂಶ ಸಂಖ್ಯೆ-1 ರಿಂದ 3 ನ್ನು ಸಕಾರಾತ್ಮಕವೆಂದು ಮತ್ತು ವಿವಾದಾಂಶ ಸಂಖ್ಯೆ-4 ನ್ನು ಭಾಗಶಃ ಸಕಾರಾತ್ಮಕವೆಂದು ನಿರ್ಣಯಿಸಲಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಭಾಗಶಃ ಡಿಕ್ರಿ ಮಾಡಲಾಗಿರುತ್ತದೆ.

ವಾದಿಯು ಪ್ರತಿವಾದಿಯಿಂದ ರೂ.10,26,523/- ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ.

ವಾದಿಯು ಪ್ರತಿವಾದಿಯಿಂದ ರೂ.3,90,000/- ಮೊತ್ತಕ್ಕೆ ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಹಣವನ್ನು ಪಾವತಿಸುವ ದಿನಾಂಕದವರೆಗೂ ವಾರ್ಷಿಕ ಶೇಕಡ 6 ರ ಬಡ್ಡಿದರದಲ್ಲಿ ಬಡ್ಡಿಯನ್ನು ಪಡೆಯಲು ಅರ್ಹರಿರುತ್ತಾರೆ.

ಈ ಪ್ರಕಾರ ಡಿಕ್ರಿ ಬರೆಯುವಂತೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 17 ನೇ ಜೂನ್, 2026 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

<u>ಅನುಬಂಧ</u>

ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-

ಪಿ.ಡಬ್ಲೂ-1	:	ಜಗದೀಶ್ ಚಂದ್

ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-

ನಿಪಿ-1	:	ದಿನಾಂಕ 30.12.2017 ರ ಸಾಲದ ಅರ್ಜಿ
ನಿಪಿ-2	:	ಮಂಜೂರಾತಿ ದಾಖಲಾತಿ
ನಿಪಿ-3	:	ಸಾಲದ ಕರಾರು ಪತ್ರ
ನಿಪಿ-4 ಮತ್ತು 5	:	ಸಾಲದ ನವೀಕರಣ ದಾಖಲಾತಿಗಳು
ನಿಪಿ-6	:	ಸಾಲದ ಎಕ್ಸಟ್ರಾಕ್ಟ್

ಪ್ರತಿವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-

- ಇಲ್ಲ -

ಪ್ರತಿವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-

- ಇಲ್ಲ -

RAGHURAMA N S
Digitally signed by RAGHURAMA N S
Date: 2026.06.18 10:56:02 +0530

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.